ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ 172/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕುಶಲ ಮಣಿಯಾಣಿ | ಚಾಸಾಃ 5 |
| ತಂದೆಯ ಹೆಸರು | : | ನಾರಾಯಣ ಮಣಿಯಾಣಿ | ಫ್ರಾಸಾಃ 9 |
| ಪ್ರಾಯ | : | 59 ವರ್ಷ | ದಿನಾಂಕಃ 06.08.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಎ.ಎಸ್.ಐ ಉಳ್ಳಾಲ ಪೊಲೀಸ್ ಠಾಣೆ | |
| ವಾಸಸ್ಥಳ | : | ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಜುಲೈ 2018 ರಿಂದ ಸೆಪ್ಟೆಂಬರ್ 2020 ರವರೆಗೆ ಕಾವೂರು ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿ. 18.11.2019 ರಂದು ನಾನು, ಫ್ರಾಸಾ-1, ಚಾಸಾ-4, ಚಾಸಾ-6 ರಿಂದ ಚಾಸಾ-8 ರವರೊಂದಿಗೆ ಸೇರಿಕೊಂಡು ರೌಂಡ್ಸ್ ಕರ್ತವ್ಯದಲ್ಲಿ ಇದ್ದಾಗ ಬೆಳಿಗ್ಗೆ 10.25 ಗಂಟೆಗೆ ಫ್ರಾಸಾ-1 ರವರಿಗೆ ಬಂದ ಮಾಹಿತಿಯ ಪ್ರಕಾರ ಪಣಂಬೂರು ಪೊಲೀಸ್ ಠಾಣಾ ವ್ಯಾಪ್ತಿಯ ಕೂರಿಕಟ್ಟ ಗೂಡ್ಸ್ ರೈಲ್ವೆ ಗೇಟ್ ಜಂಕ್ಷನ್ ಬಳಿ ಇರುವ ಸರ್ಕಲ್ ನಲ್ಲಿ ಇಬ್ಬರು ವ್ಯಕ್ತಿಗಳು ಗಾಂಜವನ್ನು ಮಾರಾಟ ಮಾಡಲು ಅಲ್ಲಿ ಬಂದು ಸಂಚು ರೂಪಿಸುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ಆಗ ಫ್ರಾಸಾ-1 ರವರು ಸೇರಿ ನಾವೆಲ್ಲರೂ ಖುದ್ದಾಗಿ ಪಣಂಬೂರು ಪೊಲೀಸ್ ಠಾಣೆಗೆ ಹೋಗಿದ್ದು ಆಗ ಫ್ರಾಸಾ-1 ರವರು ದೂರನ್ನು ನೀಡಿರುತ್ತಾರೆ.

3. ನಂತರ ಚಾಸಾ-17 ರವರು ಈ ವಿಚಾರವನ್ನು ತಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ಸದರಿ ಆರೋಪಿಗಳು ತಪ್ಪಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಇಬ್ಬರು ಪಂಚರನ್ನು ಠಾಣೆಗೆ ಕರೆಸಿಕೊಂಡಿರುತ್ತಾರೆ. ನಂತರ ನಾವೆಲ್ಲರೂ, ಇಬ್ಬರು ಪಂಚರು ಹಾಗೂ ಚಾಸಾ-17 ರವರು ಸೇರಿ ತನಿಖಾ ಸಲಕರಣೆಗಳು ತೆಗೆದುಕೊಂಡು ಪಣಂಬೂರು ಪೊಲೀಸ್ ಠಾಣೆಯನ್ನು ಬಿಟ್ಟು ಸದರಿ ಕೂರಿಕಟ್ಟ ಬಳಿಯ ಗೂಡ್ಸ್ ರೈಲ್ವೆ ಗೇಟ್ ಜಂಕ್ಷನ್ ಹತ್ತಿರ ಇರುವ ಸರ್ಕಲ್ ಹತ್ತಿರ ಹೋಗಿ ದೂರದಲ್ಲಿ ನಮ್ಮ ವಾಹನವನ್ನು ಆರೋಪಿಗಳಿಗೆ ಕಾಣದ ರೀತಿಯಲ್ಲಿ ನಿಲ್ಲಿಸಿರುತ್ತೇವೆ.

4. ನಂತರ ನಾವೆಲ್ಲರೂ ನಮ್ಮ ನಮ್ಮ ಅಂಗ ಶೋಧನೆಯನ್ನು ಮಾಡಿಕೊಂಡು ನಮ್ಮಲ್ಲಿ ಯಾವುದೇ ಮಾದಕ ವಸ್ತುಗಳಾಗಲಿ, ಪ್ಲಾಸ್ಟಿಕ್ ಚೀಲಗಳಾಗಲಿ ಇಲ್ಲ ಎಂದು ಖಚಿತಪಡಿಸಿಕೊಂಡು ನಾವೆಲ್ಲರೂ ಒಟ್ಟಾಗಿ ಸರ್ಕಲ್ ಬಳಿ ಸ್ಕೂಟರ್ ನೊಂದಿಗೆ ಇದ್ದ ಆರೋಪಿಗಳ ಮೇಲೆ ದಾಳಿ ಮಾಡಿದಾಗ ಆರೋಪಿಗಳು ಅಲ್ಲಿಂದ ಓಡಿ ಹೋಗಿದ್ದು ಅವರಲ್ಲಿ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಹಿಡಿದಿರುತ್ತೇವೆ ಮತ್ತು 2 ನೇ ಆರೋಪಿಯು ಓಡಿ ಹೋಗಿರುತ್ತಾನೆ.

5. ಆಗ ಚಾಸಾ–17 ರವರು 1 ನೇ ಆರೋಪಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಆತನು ತನ್ನ ಹೆಸರು ಜಯರಾಮ್ ಎಂದು, ಮೀನಕಳಿಯ ನಿವಾಸಿ ಎಂದು ಮತ್ತು ಓಡಿ ಹೋದ 2 ನೇ ಆರೋಪಿಯ ಹೆಸರು ಅಜಿತ್ @ ಮೈಸೂರು ನವಾಜ್ ಎಂದು ತಿಳಿಸಿರುತ್ತಾನೆ. 1 ನೇ ಆರೋಪಿಯು ಮುಂದುವರೆದ ತಾನು ಮತ್ತು 2 ನೇ ಆರೋಪಿ ಸೇರಿ ಬೇರೆ ಕಡೆಯಿಂದ ಗಾಂಜವನ್ನು ಖರೀದಿ ಮಾಡಿಕೊಂಡು ಬಂದು ಗಿರಾಕಿಗಳಿಗೆ ಗಾಂಜವನ್ನು ಮಾರಾಟ ಮಾಡಲು ಕಾಯುತ್ತಿರುವುದಾಗಿ ಮತ್ತು ಈಗಾಗಲೇ ಸ್ವಲ್ಪ ಗಾಂಜವನ್ನು ಮಾರಾಟ ಮಾಡಿರುವುದಾಗಿ ಮತ್ತು ಗಾಂಜವನ್ನು ಮಾರಾಟ ಮಾಡಲು ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ.

6. ನಂತರ ಪಂಚರ ಸಮಕ್ಷಮ ಅಲ್ಲಿದ್ದ ಸ್ಕೂಟರ್ ನ ನೊಂದಣಿ ಸಂಖ್ಯೆಯನ್ನು ಪರಿಶೀಲಿಸಿರುತ್ತೇವೆ. ಸದರಿ ಸ್ಕೂಟರ್ ಗ್ರೇ ಬಣ್ಣದಾಗಿತ್ತು. ಸದರಿ ಸ್ಕೂಟರ್ ನ ಸೈಡ್ ಬಾಕ್ಸ್ ನಲ್ಲಿ ಗಾಂಜ ಇರುವುದಾಗಿ 1 ನೇ ಆರೋಪಿಯು ಹೇಳಿರುತ್ತಾನೆ.

7. ನಂತರ 1 ನೇ ಆರೋಪಿಗೆ ಅಂಗ ಜಪ್ತಿಗೆ ಸಂಬಂಧಪಟ್ಟಂತೆ ಚಾಸಾ–17 ರವರು ನೋಟೀಸ್ ನ್ನು ಕೊಟ್ಟಿರುತ್ತಾರೆ. ನಂತರ ಸ್ಕೂಟರ್ ನ ಸೈಡ್ ಬಾಕ್ಸ್ ನ್ನು ಪಂಚರ ಸಮಕ್ಷಮ ತೆಗೆದು ನೋಡಿದಾಗ ಅದರಲ್ಲಿ ಒಂದು ಪ್ಲಾಸ್ಟಿಕ್ ಕವರ ಇದ್ದು ಅದನ್ನು ತೆಗೆದು ನೋಡಿದಾಗ ಅದರಲ್ಲಿ ಹಸಿರು ಬಣ್ಣದ ಎಲೆಗಳು, ಹೂ ಗಳು ಮತ್ತು ಬೀಜಗಳು ಇದ್ದು ಅವುಗಳಿಂದ ಘಾಟು ಬರುತ್ತಿತ್ತು ಮತ್ತು ಅದರಿಂದ ನಮಗೆ ಅದು ಗಾಂಜವಾಗಿರುತ್ತದೆ ಎಂದು ಖಚಿತವಾಗಿರುತ್ತದೆ. ಸ್ಕೂಟರ್ ನ ಸೈಡ್ ಬಾಕ್ಸ್ ನಲ್ಲಿ ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಕವರ್ ಗಳು ಬಂಡಲ್ ಇದ್ದು ಅವುಗಳನ್ನು ಸಣ್ಣ ಸಣ್ಣ ಪ್ರಮಾಣದಲ್ಲಿ ಗಾಂಜವನ್ನು ಮಾರಾಟ ಮಾಡಲು ಉಪಯೋಗಿಸುತ್ತಿರುವುದಾಗಿ 1 ನೇ ಆರೋಪಿ ಹೇಳಿರುತ್ತಾರೆ.

8. ಸದರಿ ಗಾಂಜವನ್ನು ನಾವು ತೂಕ ಮಾಡಿ ನೋಡಲಾಗಿ ಅದು ಒಂದು ಕೆ.ಜಿ 180 ಗ್ರಾಂ ಇತ್ತು. ಸದರಿ ಗಾಂಜವನ್ನು ಮುಂದಿನ ತನಿಖೆಗಾಗಿ ಸ್ಥಳದಲ್ಲಿಯೆ ಪಂಚರ ಸಮಕ್ಷಮ ಬಳಿ ಬಟ್ಟೆಯಿಂದ ಸುತ್ತಿ ಹೊಲಿದು ಅದಕ್ಕೆ ಪಿ.ಪಿ.ಎಸ್ ಎಂಬ ಇಂಗ್ಲೀಪ್ ಅಕ್ಷರಗಳ ಅರಗು ಸೀಲ್ ಹಾಕಿ ಸೀಲ್ ಮಾಡಿರುತ್ತೇವೆ ಮತ್ತು ಸದರಿ ಚೀಲಕ್ಕೆ ಪಂಚರ ಮತ್ತು ಚಾಸಾ–17 ರವರು ಸಹಿಗಳಿರುವ

ಚೀಟಿಯನ್ನು ಅಂಟಿಸಲಾಗಿರುತ್ತದೆ.

9. ನಂತರ ಆರೋಪಿ ತನ್ನ ಅಂಗ ಜಪ್ತಿಯನ್ನು ಮಾಡಲಾಗಿ ಪ್ಯಾಂಟ್ ನ ಎಡ ಕಿಸೆಯಲ್ಲಿ ಒಂದು ಓಪ್ಪೋ ಕಂಪನಿಯ ಮೊಬೈಲ್ ಫೋನ್ ಇದ್ದು ಮತ್ತು ಆತನ ಪ್ಯಾಂಟ್ ನ ಬಲ ಕಿಸೆಯಲ್ಲಿ ರೂ.4,000/– ನಗದು ಹಣ ಇತ್ತು. 1 ನೇ ಆರೋಪಿಯು ಸದರಿ ರೂ.4000/– ಗಳು ಗಾಂಜ ಮಾರಾಟದಿಂದ ಬಂದ ಹಣವಾಗಿರುತ್ತದೆ ಎಂದು ಹೇಳಿರುತ್ತಾನೆ.

10. ಈ ಸ್ವತ್ತುಗಳನ್ನೆಲ್ಲಾ ಬೆಳಿಗ್ಗೆ 11.45 ರಿಂದ 01.15 ಗಂಟೆಯವರೆಗೆ ಸ್ಥಳದಲ್ಲಿಯೇ ಲ್ಯಾಪ್ ಟಾಪ್ ಮೂಲಕ ಪಂಚನಾವೆಯನ್ನು ತಯಾರಿಸಿದ್ದು ನಂತರ ಚಾಸಾ–8 ರವರು ಸದರಿ ಲ್ಯಾಪ್ ಟಾಪ್ ನ್ನು ಪಣಂಬೂರು ಪೊಲೀಸರಿಗೆ ಠಾಣೆಗೆ ತೆಗೆದುಕೊಂಡು ಹೋಗಿ ಅಲ್ಲಿ ಪಂಚನಾವೆಯ ಪ್ರಿಂಟ್ ತೆಗೆದು ಪುನಃ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಆಗ ಹಾಜರಿದ್ದ ಪಂಚರು ಚಾಸಾ–1 ಮತ್ತು ನಾವೆಲ್ಲ ಉಳಿದ ಸಿಬ್ಬಂದಿಗಳು ಮತ್ತು 1 ನೇ ಆರೋಪಿ ಅದಕ್ಕೆ ಸಹಿ ಮಾಡಿರುತ್ತೇವೆ. ಸದರಿ ಪಂಚನಾವೆಯನ್ನು ನೋಡುತ್ತಿದ್ದು ಅದು ಈಗಾಗಲೇ ನಿಪಿ–2 ಎಂದು ಸಾಕ್ಷಿ ಸಹಿಯನ್ನು ನಿಪಿ–2(ಡಿ) ಎಂದು ಗುರುತಿಸಲಾಯಿತು.

11. ಈ ಪ್ರಕ್ರಿಯೆಯ ಎಲ್ಲಾ ಫೊಟೋಗಳನ್ನು ನಾನು ನನ್ನ ಮೊಬೈಲ್ ನಲ್ಲಿ ಹಿಡಿದಿರುತ್ತೇನೆ. ನಂತರ ಸೈಬರ್ ಸೆಂಟರ್ ಗೆ ತೆಗೆದುಕೊಂಡು ಹೋಗಿ ಅದರ ಫೊಟೋಗಳ ಪ್ರಿಂಟ್ ನ್ನು ಮತ್ತು ಸಿ.ಡಿ ಯನ್ನು ತೆಗೆಸಿ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ಫೊಟೋಗಳನ್ನು ಮತ್ತು ಸಿ.ಡಿ ಯನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ–3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಫೊಟೋವನ್ನು ತೆಗೆದ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಕಲಂ 65(ಬಿ) ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–12 ಎಂದು, ಸಾಕ್ಷಿ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು.

12. ಅಮಾನತುಪಡಿಸಿಕೊಂಡ ಮೊಬೈಲ್ ನ ಫೊಟೋ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿರುತ್ತದೆ. ಅಮಾನತುಪಡಿಸಿಕೊಂಡ ಸ್ಕೂಟರ್ ನ ನಾಲ್ಕು ಫೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ಈಗಾಗಲೇ ನಿಪಿ–5 ಎಂದು ಗುರುತಿಸಲಾಗಿರುತ್ತದೆ. ಅಮಾನತುಪಡಿಸಿಕೊಂಡ ರೂ.4,000/– ಗಳನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿರುತ್ತದೆ. ಸಣ್ಣ ಸಣ್ಣ ಪ್ಲಾಸ್ಟಿಕ್ ಕವರ್ ನ ಬಂಡಲ್ ನೋಡುತ್ತಿದ್ದು ಅದನ್ನು ಈಗ ಮು.ಮಾ–3 ಎಂದು ಗುರುತಿಸಲಾಯಿತು.

13. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

14. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (2 ನೇ ಆರೋಪಿಯು ತಲೆಮರಿಸಿಕೊಂಡಿದ್ದು ಆತನ ಪ್ರಕರಣವನ್ನು ಬೇರ್ಪಡಿಸಲಾಗಿದೆ).

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಪಿ.ಸಿ., ವಕೀಲರಿಂದಃ

15. ಪಣಂಬೂರು ಪೊಲೀಸ್ ಠಾಣೆಯಿಂದ ಕೂರಿಕಟ್ಟ ಗೂಡ್ಸ್ ರೈಲ್ವೆ ಗೇಟ್ ಜಂಕ್ಷನ್ ಬಳಿ ಇರುವ ಸರ್ಕಲ್ 3-4 ಕಿ.ಮೀ ದೂರದಲ್ಲಿ ಇರುತ್ತದೆ. ಆ ದಿನ 1 ನೇ ಆರೋಪಿಯು ಸುರತ್ಕಲ್ ಕಡೆಯಿಂದ ಪಣಂಬೂರು ಕಡೆಗೆ ಆಟೋ ಚಲಾಯಿಸಿಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ. 1 ನೇ ಆರೋಪಿಯು ಬೈಕಂಪಾಡಿ ಹತ್ತಿರ ಬರುವಾಗ ಆತನನ್ನು ತಡೆದು ನಿಲ್ಲಿಸಿ ಪಣಂಬೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ.

16. ನಾನು ಹೇಳಿದಂತೆ ಕೂರಿಕಟ್ಟ ಗೂಡ್ಸ್ ರೈಲ್ವೆ ಗೇಟ್ ಜಂಕ್ಷನ್ ಬಳಿ ಇರುವ ಸರ್ಕಲ್ ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಮೊಬೈಲ್ ಮತ್ತು ಗಾಂಜವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಅಮಾನತುಪಡಿಸಿಕೊಂಡ ಸ್ಕೂಟರ್ ಗೂ ಮತ್ತು 1 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರದೇ ಇದ್ದರೂ ಕೂಡ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಮಹಜರಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಮತ್ತು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಕಲಂ 65(ಬಿ) ಪ್ರಮಾಣ ಪತ್ರವನ್ನು ಕೊಡಲು ನಾನು ಯಾವುದೇ ಪರಿಣಿತಿಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.